## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
## ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೇ, ಬೆಂಗಳೂರು-560 065

### ಟೆಂಡರ್ ಅಧಿಸೂಚನೆ ಸಂಖ್ಯೆ: ಸಸ್ಯ ಉದ್ಯಾನವನ ಬಳಿಯ ಉಪಹಾರ ಮಂದಿರ/ಅಂಗಡಿ ಮಳಿಗೆಗಳನ್ನು ಹಂಚಿಕೆ ಮಾಡಲು ಟೆಂಡರ್ ಪ್ರಕಟಣೆ ದಿನಾಂಕ: 02-06-2026

ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸುಮಾರು 2000 ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಉಪಹಾರ / ಆಹಾರವನ್ನು (ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ ಷರತ್ತಿಗೊಳಪಟ್ಟು 02 ವರ್ಷಗಳ ಅವಧಿಗೆ) ಪೂರೈಕೆ ಮಾಡಲು ಕಾರ್ಮಿಕ ಕಾಯ್ದೆಯಡಿಯಲ್ಲಿ ನೋಂದಾಯಿತ ನುರಿತ ಕ್ಯಾಟರರ್ಸ್ / ಹೋಟೆಲ್ ಉದ್ಯಮಿಗಳಿಂದ ದ್ವಿ-ಲಕೋಟೆಯಲ್ಲಿ ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

**1) ಸಸ್ಯ ಉದ್ಯಾನವನ ಬಳಿಯ ಉಪಹಾರ ಮಂದಿರ**

**2) ಅಂಗಡಿ ಮಳಿಗೆಗಳ ವಿವರಗಳು:** 1) ಕಂಪ್ಯೂಟರ್ ಮಾರಾಟ ಮತ್ತು ಸೇವೆಗಳು ಮಳಿಗೆ-1,
2) ಸ್ಟೇಷನರಿ ಮಳಿಗೆ -1,
3) ಛಾಯಾ ಪ್ರತಿ, ಬೆರಳಚ್ಚು ಮಳಿಗೆ-1,

ಟೆಂಡರ್‌ದಾರರು ತಾಂತ್ರಿಕ ಮತ್ತು ಹಣಕಾಸಿನ ಬಿಡ್ಡುಗಳನ್ನು ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕಾಗಿರುತ್ತದೆ.

**ಷೆಡ್ಯೂಲ್ ವಿವರ**

| | | |
|---|---|---|
| 1 | ಟೆಂಡರ್ ಫಾರಂ ಪಡೆಯಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ. | 11-06-2026 ಮಧ್ಯಾಹ್ನ 12.30 ಗಂಟೆಯವರೆಗೆ |
| 2 | ಖಾಲಿ ಟೆಂಡರ್ ಫಾರಂ ನೀಡುವ ಪ್ರಾರಂಭಿಕ ದಿನಾಂಕ. | 08-06-2026 ಬೆಳಿಗ್ಗೆ 9.00 ಗಂಟೆಯಿಂದ |
| 3 | ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ. | 11-06-2026 ಮಧ್ಯಾಹ್ನ 2.00 ಗಂಟೆಯವರೆಗೆ |
| 4 | ತಾಂತ್ರಿಕ ಬಿಡ್ಡುಗಳನ್ನು ಮತ್ತು ಹಣಕಾಸಿನ ಬಿಡ್ಡುಗಳನ್ನು ತೆರೆಯುವ ದಿನಾಂಕ. | 11-06-2026 ಮಧ್ಯಾಹ್ನ 3.30 ಗಂಟೆಗೆ |

**I. ಸಸ್ಯ ಉದ್ಯಾನವನ ಬಳಿಯ ಉಪಹಾರ ಮಂದಿರ:**

ಆಸಕ್ತಿಯುಳ್ಳ ಟೆಂಡರ್‌ದಾರರು ತಾಂತ್ರಿಕ ಬಿಡ್ಡಿನಲ್ಲಿ 1) ಸಂಸ್ಥೆಯ ನೋಂದಾವಣೆ ಪ್ರಮಾಣ ಪತ್ರ. 2) ಅನುಭವದ ಪ್ರಮಾಣ ಪತ್ರ. 3) ಕೆಲಸ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲಗಳ ವಿವರ. 4) ರೂ.2,00,000/- ಗಳಿಗೆ ಸಾಲ್ವೆನ್ಸಿ ಪ್ರಮಾಣ ಪತ್ರ. 5) ಹಾಲಿ ಕಾರ್ಯನಿರ್ವಹಿಸುತ್ತಿರುವ ಹೋಟೆಲ್‌ಗಳ ಛಾಯಚಿತ್ರಗಳು. 6) ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಪ್ರಮಾಣ ಪತ್ರ (FSSAI), 7) ಕಾರ್ಮಿಕರ ನೋಂದಾವಣೆ ಪ್ರಮಾಣ ಪತ್ರ ESI/PF ಮತ್ತು ESI ಹಾಗೂ PF ಪಾವತಿಸಿರುವ ಚಲನ್‌ಗಳ ಪ್ರತಿಗಳು, 8) ನೂತನವಾಗಿ ನವೀಕರಿಸಿರುವ ಪ್ರಮಾಣ ಪತ್ರ (FSSAI Renewal Certificate), 9) ಕನಿಷ್ಠ 3 ವರ್ಷದ ಆದಾಯ ತೆರಿಗೆ ಪಾವತಿಸಿರುವ ದಾಖಲೆಗಳು, 10) ಜಿಎಸ್‌ಟಿ ಪ್ರಮಾಣ ಪತ್ರ. 11) ಫಾನ್ ಕಾರ್ಡ್, 12) ಆಧಾರ್ ಕಾರ್ಡ್, 13) ಕಾರ್ಮಿಕ ಇಲಾಖೆಯಿಂದ ನೀಡುವ ಪ್ರಮಾಣ ಪತ್ರ(MSME), 14) ಭದ್ರತಾ ಠೇವಣಿಯಾಗಿ ರೂ.1,00,000/- ಗಳನ್ನು ಡಿಡಿ ಮುಖಾಂತರ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು-65, ಇವರ ಹೆಸರಿಗೆ ಸಲ್ಲಿಸುವುದು. ಖಾಲಿ ಟೆಂಡರ್ ಫಾರಂನ ಬೆಲೆ ರೂ.2,000/-. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ. ಉಪಹಾರ ಮಂದಿರದ ಮೇಲ್ವಿಚಾರಣಾ ಸಮಿತಿಯ ಸಭೆಯು ತಾಂತ್ರಿಕ ಬಿಡ್ಡುಗಳನ್ನು ಪರಿಶೀಲಿಸಿ, ತಾಂತ್ರಿಕ ಬಿಡ್ಡಿನಲ್ಲಿ ತೇರ್ಗಡೆ ಹೊಂದಿರುವ ಟೆಂಡರ್‌ದಾರರನ್ನು ಆಯ್ಕೆ ಮಾಡಲಾಗುತ್ತದೆ.

ಪ.ತಿ.ನೋ.

**II. ಅಂಗಡಿ ಮಳಿಗೆಗಳು:**

ಆಸಕ್ತಿಯುಳ್ಳ ಅರ್ಜಿದಾರರು ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅನುಭವ ಪ್ರಮಾಣ ಪತ್ರ ಹಾಗೂ ಸಕ್ಷಮ ಪ್ರಾಧಿಕಾರವು ನೀಡಿರುವ ಪರವಾನಗಿ ಪತ್ರದ ಪ್ರತಿಯೊಂದಿಗೆ ನಿಗದಿತ ಅಂಗಡಿ ಮಳಿಗೆಗಳಿಗೆ ಅರ್ಜಿ ನೀಡಬೇಕು ಹಾಗೂ ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ಅರ್ಜಿಯೊಂದಿಗೆ ಖಾಲಿ ಟೆಂಡರ್ ಫಾರಂನ ಬೆಲೆ ರೂ.1,000=00 ಗಳ ಡಿಡಿಯನ್ನು **"ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಗಾಕೃವಿಕೇ, ಬೆಂಗಳೂರು-65"** ಇವರ ಹೆಸರಿಗೆ ಪಡೆದು ಸಲ್ಲಿಸುವುದು. ಬೇರೆ ಬೇರೆ ಮಳಿಗೆಗಳಿಗೆ ಪ್ರತ್ಯೇಕವಾದ ಅರ್ಜಿಗಳನ್ನು ಪಡೆಯಬೇಕಾಗಿರುತ್ತದೆ. **ರೂ.50,000=00** ಗಳನ್ನು ಮುಂಗಡ ಭದ್ರತಾ ಠೇವಣಿ, ಪಾನ್ ಕಾರ್ಡ್, ಆಧಾರ್ ಕಾರ್ಡ್ ಹಾಗೂ ಜಿಎಸ್‌ಟಿ ಪ್ರಮಾಣ ಪತ್ರಗಳನ್ನು ಟೆಂಡರ್ ಫಾರಂ ಜೊತೆ ಸಲ್ಲಿಸಬೇಕಾಗಿರುತ್ತದೆ. ಮುಂಗಡ ಭದ್ರತಾ ಹಣವನ್ನು ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ, ಬೆಂಗಳೂರು, ಇವರ ಹೆಸರಿಗೆ ಪಡೆದು ಟೆಂಡರ್ ಫಾರಂ ಜೊತೆ ಲಗತ್ತಿಸುವುದು. ಅಂಗಡಿ ಮಳಿಗೆಯ ಹಂಚಿಕೆಯ ನಿಯಮಗಳು ಮತ್ತು ಕರಾರಿನ ನಿಯಮಗಳನ್ನು ಟೆಂಡರ್ ಫಾರಂ ಜೊತೆಯಲ್ಲಿ ಪಡೆಯಬಹುದು. ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ.

**ವಿಶೇಷ ಸೂಚನೆ:** ಖಾದ್ಯಗಳ ದರಪಟ್ಟಿಯನ್ನು ಟೆಂಡರ್ ಫಾರಂನ ಜೊತೆ ನಮೂದಿಸಿ ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕಾಗುತ್ತದೆ.

ಆಸ್ತಿ ಅಧಿಕಾರಿಗಳು